## ಭೀಮಾ ಕೊರೆಗಾಂವ್ ಹೋರಾಟ ಸಮಿತಿ–ಕರ್ನಾಟಕ


# ಭೀಮಾ ಕೊರೆಗಾಂವ್ ವಿಜಯೋತ್ಸವ ಆಚರಣೆ ಹಾಗು ಮಾನವಹಕ್ಕು ಹೋರಾಟಗಾರರ ಬಿಡುಗಡೆಗೆ ಒತ್ತಾಯಿಸಿ ಪ್ರತಿರೋಧ ಸಮಾವೇಶ

**ದಿನಾಂಕ : 01–01–2021**

**ಸ್ಥಳ: ಫ್ರೀಡಂ ಪಾರ್ಕ್, ಸಮಯ: 10.30 ರಿಂದ 5ರ ವರೆಗೆ**

ಬಂಧುಗಳೇ...

ಭಾರತದೇಶವು ದಲಿತರ ಪಾಲಿಗೆ ಸಂಕಟಗಳ ತೊಟ್ಟಿಲಾಗಿದ್ದಾಗ ಬಾಬಾ ಸಾಹೇಬರು ಹುಡುಕಿಕೊಟ್ಟ ನಚ್ಚಗಿನ ನೆನಪು ಭೀಮಾ ಕೋರೆಗಾಂವ್. 1818ರಲ್ಲಿ ಕೋರೆಗಾಂವ್ ಯುದ್ಧ ನಡೆದ ಕಾಲಘಟ್ಟದಲ್ಲಿ ಭಾರತವು ಅಸ್ಪೃಶ್ಯತೆಯನ್ನು ಇಡೀ ಮನುಕುಲವು ತಲೆತಗ್ಗಿಸುವ ಹಾಗೆ ಆಚರಿಸುತ್ತಿತ್ತು. ಪೇಶ್ವೆಗಳ ಆಡಳಿತವು ಈ ತಾರತಮ್ಯದ ಸೋಂಕಿಗೆ ಇಂಬು ನೀಡುತ್ತಿತ್ತು. ಈ ಅಮಾನವೀಯ ಅಸಮಾನತೆಯನ್ನು ಸಹಿಸಲಾಗದ ದಲಿತರು ಮಹರ್ ರೆಜಿಮೆಂಟಿನ ಹೆಸರಿನಲ್ಲಿ ಸ್ಫೋಟಿಸಿದರು. ಕೇವಲ 500 ಜನ ಮಹರ್ ಸೈನಿಕರು 30000ಕ್ಕೂ ಹೆಚ್ಚಿನ ಪೇಶ್ವೆ ಸೈನಿಕರ ವಿರುದ್ಧ ಯುದ್ಧಕ್ಕೆ ನಿಂತುಗೆದ್ದರು. ಈ ಹೋರಾಟದಲ್ಲಿ ಪ್ರಾಣತೊರೆದ 21 ಜನ ಮಹರ್ ಸೈನಿಕರ ನೆನಪಿಗಾಗಿ ಬ್ರಿಟಿಷ್ ಸರಕಾರ ಕೋರೆಗಾಂವ್‌ನಲ್ಲಿ ವಿಜಯಸ್ಥಂಭವನ್ನು ಸ್ಥಾಪಿಸಿತು. ದಲಿತರ ಸ್ವಾಭಿಮಾನದ ಹೋರಾಟದ ನೆನಪಾದ ಈ ಸ್ಮಾರಕವು ಬಾಬಾ ಸಾಹೇಬರಕಣ್ಣಿಗೆ ಬಿದ್ದು 1927 ರಿಂದ ದಲಿತರ ವಿಜಯೋತ್ಸವದ ಕೇಂದ್ರವಾಯಿತು ಹಾಗೂ ಅಸ್ಪೃಶ್ಯತೆಯ ವ್ರಣಗಳಿಂದ ಒಡಲ ತುಂಬಾ ಸಂಕಟವನ್ನೇ ತುಂಬಿಕೊಂಡಿದ್ದ ದಲಿತರ ಕಣ್ಣುಗಳಲ್ಲಿ ಹೊಸ ಬೆಳಕಿನ ದಾರಿತೆರೆಯಿತು.



ಕೋರೆಗಾಂವ್‌ನಲ್ಲಿ ಗೆದ್ದ ವಂಚಿತರ ತಲೆಮಾರುಗಳು ಆ ದಿನವನ್ನು ಒಂದು ಹಬ್ಬವನ್ನಾಗಿ ಆಚರಿಸುವ ಪರಿಪಾಠ ಬೆಳೆಸಿಕೊಂಡರು. ಸ್ವಾಭಿಮಾನಕ್ಕಾಗಿ ಪ್ರಾಣತ್ಯಾಗ ಮಾಡಿದ ಹಿರಿಯರ ನೆನಪಿನಲ್ಲಿ ದೀಪ ಹಚ್ಚತೊಡಗಿದರು. ಇದರ ಭಾಗವಾಗಿ 2017 ರಡಿಸೆಂಬರ್ 31ರಂದು ಬಾಬಾ ಸಾಹೇಬ್ ಅಂಬೇಡ್ಕರರ ಮೊಮ್ಮಗ ಹಾಗು ದಲಿತ ಹೋರಾಟಗಾರ ಪ್ರಕಾಶ್‌ಅಂಬೇಡ್ಕರ್ ಮತ್ತು ಗುಜರಾತಿನ ಯುವ ದಲಿತ ಹೋರಾಟಗಾರ ಜಿಗ್ನೇಶ್ ಮೇವಾನಿ ನಾಯಕತ್ವದಲ್ಲಿ 200 ವರ್ಷಗಳ ಕೋರೆಗಾಂವ್ ವಿಜಯೋತ್ಸವದ ಭಾಗವಾಗಿ 'ಎಲ್ಗಾರ್ ಪರಿಷದ್' ಅನ್ನು ಆಯೋಜಿಸಲಾಗಿತ್ತು. ಅಂದರೆ 'ಜಾಗೃತಿ ಸಮಾವೇಷ', 'ಭೀಮಕೋರೆಗಾಂವ್ ಶೌರ್ಯ ದಿನ್ ಪ್ರೇರಣಾ ಅಭಿಯಾನ್' ಹೆಸರಿನಲ್ಲಿ ಒಂದುಗೂಡಿದ್ದ ದಲಿತರ ಈ ಜಾಗೃತಿಯು ಸ್ಪಷ್ಟವಾಗಿ ಬ್ರಾಹ್ಮಣವಾದದ ಮರುರೂಪಗಳನ್ನು ವಿರೋಧಿಸುವುದೇ ಆಗಿತ್ತು. 'ನವ ಪೇಶ್ವೆಗಿರಿ ಅಥವಾ ಫ್ಯಾಸಿಸಂ ವಿರುದ್ಧ ಧ್ವನಿ ಎತ್ತೋಣ' ಎನ್ನುವುದು ಈ ಸಮಾವೇಷದ ಘೋಷವಾಕ್ಯವಾಗಿತ್ತು. ನವ ಫ್ಯಾಸಿಸಂಗೆ ಬಲಿಯಾದ ರೋಹಿತ್ ವೇಮುಲ ತಾಯಿ ರಾಧಿಕಾ ವೇಮುಲ ಭಾಗವಹಿಸಿದ್ದು ಈ ಸಮಾವೇಷ ಭಾರತದ ಮನುವಾದಿಗಳಿಗೆ ಸ್ಪಷ್ಟ ರಾಜಕೀಯ ಎಚ್ಚರವಾಗಿ ಪರಿಣಮಿಸಿತು. ಇದು ಯಥಾಸ್ಥಿತಿವಾದಿಗಳ ರೋಗ ಉಲ್ಬಣವಾಗಲು ಕಾರಣವಾಯಿತು. ಈ ನಂತರದಲ್ಲಿ ಭೀಮಾಕೋರೆಗಾಂವ್ ಆಚರಣೆ ವೇಳೆಯಲ್ಲಿ ದಲಿತರ ವಾಹನಗಳಿಗೆ ಬೆಂಕಿ ಹಚ್ಚಲಾಯಿತು. ಇದು 2018ರಲ್ಲೂ ಮರುಕಳಿಸಿತು. ಈ ಕುತಂತ್ರದ ಭಾಗವಾಗಿ ಮರಾಠರನ್ನು ದಲಿತರ ವಿರುದ್ಧ ಎತ್ತಿಕಟ್ಟಲಾಯಿತು. ಪರಿಣಾಮವಾಗಿ ಹೆಣ ಉರುಳಿತು.

ಬೆಂಕಿ ಹಚ್ಚಲು ಯಶಸ್ವಿಯಾದ ಮನುವಾದಿಗಳು 'ಎಲ್ಗಾರ್ ಪರಿಷದ್'ನ ಮುಖಂಡರು ಅರ್ಬನ್ ನಕ್ಸಲರು ಎಂದು ಪ್ರಚಾರ ಮಾಡಿದರು ಮತ್ತು ಇದಕ್ಕೆಲ್ಲಾ ಕಾರಣವೆಂದು ಬಾಬಾ ಸಾಹೇಬರ ಕುಟುಂಬದ ದಲಿತ ಚಿಂತಕ ಆನಂದ್ ತೇಲ್ತುಂಬ್ಡೆಯವರನ್ನು ಒಳಗೊಂಡಂತೆ ಹದಿನಾರು ಹೋರಾಟಗಾರರನ್ನು ಬಂಧಿಸಲಾಯಿತು. ಈ ಗಲಬೆಗಳಿಗೆ ನಿಜಕ್ಕೂ ಕಾರಣರಾಗಿದ್ದ ಸಾಂಬಾಜಿ ಭೀಡೆ ಮತ್ತು ಮಿಳಿಂದ್ ಏಕಬೋಟೆ ಎಂಬುವವರನ್ನು ನೆಪಕ್ಕೆ ಬಂಧಿಸಿ, ನಂತರ ಆರೋಪಮುಕ್ತಗೊಳಿಸಲಾಯಿತು. ಆದರೆ ಈ ದೇಶದ ವಂಚಿತರ ಹಕ್ಕುಗಳಿಗಾಗಿ ಬರೆಯುತ್ತಿದ್ದ, ಮಾತಾಡುತ್ತಿದ್ದ, ಹೋರಾಟ ಮಾಡುತ್ತಿದ್ದ ಪ್ರಜ್ಞಾವಂತರನ್ನು ಈಗಲೂ ಕಾರಾಗೃಹಗಳಲ್ಲಿ ಇಡಲಾಗಿದೆ...

ಬಂಧುಗಳೇ... ಭಾರತದ ಅಸ್ಪೃಶ್ಯತೆಗೆ ಹೊಸ ಹೊಸ ಸೂಕ್ಷ್ಮಗಳು ಸೇರಿ ದಮನಕ್ಕೆ ಈಡುಮಾಡುತ್ತಿರುವ ಕಾಲಘಟ್ಟದಲ್ಲಿ ಇದ್ದೇವೆ ನಾವು. ತಳಸಮುದಾಯಗಳ ಮೇಲೆ, ರೈತರು, ಕಾರ್ಮಿಕರು ಮತ್ತು ಮಹಿಳೆಯರ ಮೇಲೆ ಅವ್ಯಾಹತವಾಗಿ ನಡೆಯುತ್ತಿರುವ ದೌರ್ಜನ್ಯಗಳು ಇನ್ನೂ ಶಕ್ತಿ ಹಿಗ್ಗಿಸಿಕೊಳ್ಳುತ್ತಿವೆ. ಧ್ವನಿ ಎತ್ತುವ ಹಕ್ಕನ್ನೂ ಕಸಿದುಕೊಂಡು ಪ್ರಜಾಪ್ರಭುತ್ವದ ಕತ್ತು ಹಿಸುಕುತ್ತಿರುವ ಈ ನವ ಸಾಮ್ರಾಜ್ಯಶಾಹಿಗಳನ್ನು ಹೀಗೇ ಬಿಟ್ಟರೆ ಬಾಬಾ ಸಾಹೇಬರ ಕನಸು ಭಗ್ನಗೊಳ್ಳುತ್ತದೆ. ಅವರ ಸ್ವಾಭಿಮಾನದ ಸಂವಿಧಾನವನ್ನು ನಾವಲ್ಲದೆ ಇನ್ಯಾರೂ ಉಳಿಸಲಾರರು. ಭೀಮಾಕೋರೆಗಾಂವ್ ವಿಜಯೋತ್ಸವವನ್ನು ಆಚರಿಸಬೇಕಾದ ನಾವುಗಳು ಸಂವಿಧಾನವನ್ನು ಕೊಲ್ಲಬೇಡಿ ಎಂದು ಪ್ರತಿಭಟನೆ ಮಾಡಬೇಕಾದ ಪರಿಸ್ಥಿತಿ ಎದುರಾಗಿದೆ.

**ಬನ್ನಿ.. ಸಂವಿಧಾನವನ್ನೂ, ದೇಶವನ್ನೂ.. ನಮ್ಮನ್ನೂ ಉಳಿಸಿಕೊಳ್ಳೋಣ.**

ಸಂಪರ್ಕ : ಡಾ. ಮೋಹನ್ ರಾಜ್–9845467552, ಸುಜಾಯುತ್ತುಲ್ಲ–9620865888, ಕೆ.ಬಿ. ಓಬಳೇಶ್–9742586468

# ಪ್ರತಿಗಾಮಿ, ಕೋಮುವಾದಿ, ಮನುವಾದಿ ಹಾಗೂ ಕಾರ್ಪೊರೇಟ್ ಆಡಳಿತದ ವಿರುದ್ಧ ಘೋಷಣೆ

ಭೀಮಾ ಕೊರೆಗಾಂವ್ ಹೋರಾಟ ಸಮಿತಿ ಸದಸ್ಯರುಗಳಾದ ನಾವು, ದೇಶದಲ್ಲಿ ನಡೆಯುತ್ತಿರುವ ಪ್ರತಿಗಾಮಿ ಜನವಿರೋಧಿ ಆಡಳಿತ ವೈಖರಿ, ಮನುವಾದಿ ಕಾರ್ಯಸೂಚಿಯನ್ನು ಜಾರಿಗೆ ತರಲು ನಡೆಸುತ್ತಿರುವ ರೀತಿ, ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಲು ಅಡ್ಡಿಯಾಗಿರುವ ಅಥವ ಪ್ರಶ್ನಿಸುವ ಎಲ್ಲರನ್ನು ಗುರಿಯಾಗಿಸಿ ಕಾನೂನನ್ನು ಕೈಗೆತ್ತಿಕೊಳ್ಳುವ ಹಾಗೂ ಸಂವಿಧಾನದ ಅವಕಾಶಗಳನ್ನು ವ್ಯವಸ್ಥಿತವಾಗಿ ದುರುಪಯೋಗ ಮಾಡಿಕೊಂಡು ಅಪರಾಧೀಕರಣಗೊಳಿಸುತ್ತಿರುವ ಸಂದರ್ಭದಲ್ಲಿ ಈ ಕೆಳಗಿನ ಘೋಷಣೆಗಳನ್ನು ಬಹಿರಂಗಪಡಿಸುತ್ತಿದ್ದೇವೆ.

■ ಭಾರತದ ಸಂವಿಧಾನದಲ್ಲಿ ಪ್ರತಿಪಾದಿಸಲಾಗಿರುವ ನ್ಯಾಯ, ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ಮೌಲ್ಯಗಳಿಗೆ ನಾವೆಲ್ಲರೂ ಬದ್ಧರಾಗಿರುತ್ತೇವೆ ಎಂದು ಘೋಷಿಸುತ್ತೇವೆ.

■ ಪ್ರತಿಗಾಮಿ, ಜಾತಿವಾದಿ ಮತ್ತು ಸ್ತ್ರೀ ದ್ವೇಷಿ ಪ್ರಭುತ್ವ ಮೂಲಭೂತ ಸ್ವಾತಂತ್ರ್ಯವನ್ನು ಮತ್ತು ಸಾಂವಿಧಾನಿಕ ಹಕ್ಕುಗಳನ್ನು ನಿರ್ಭಯವಾಗಿ ಉಲ್ಲಂಘನೆ ಮಾಡಿ, ನಿರ್ಧಿಷ್ಟವಾದ ಸಮಾನ ಪೌರತ್ವದ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಭಿನ್ನಾಭಿಪ್ರಾಯದ ಹಕ್ಕು, ತಾರತಮ್ಯರಹಿತ ಸ್ವಾತಂತ್ರ್ಯದ ಹಕ್ಕು, ಘನತೆ ಹಕ್ಕು, ಪ್ರೀತಿಯ ಹಕ್ಕು, ಗುರುತಿನ ಹಕ್ಕು ಮತ್ತು ಲೈಂಗಿಕ ಆದ್ಯತೆಗಳು ಹಾಗೂ ಜೀವಿಸುವ ಹಕ್ಕುಗಳನ್ನು ನಿರಾಕರಿಸುತ್ತಿರುವ ಸರಕಾರದ ದೋರಣೆಯನ್ನು ತೀವ್ರವಾಗಿ ಖಂಡಿಸುತ್ತೇವೆ.

■ ದಲಿತರು, ಕಾರ್ಮಿಕರು, ಆದಿವಾಸಿಗಳು ಹಾಗೂ ರೈತರನ್ನು ತೀವ್ರ ಬಡತನಕ್ಕೆ ತಳ್ಳುವ ಪ್ರಜ್ಞಾಪೂರ್ವಕ ಪ್ರಭುತ್ವ ಪ್ರಾಯೋಜಿತ ಕಾರ್ಯಕ್ರಮ ಮತ್ತು ಜನವಿರೋಧಿ ಕಾಯ್ದೆ ಕಾನೂನುಗಳ ತಿದ್ದುಪಡಿ ಮಾಡುವ ಅಥವ ಜನವಿರೋಧಿ ಕಾಯ್ದೆಗಳನ್ನು ತರುವ ಕ್ರಮವನ್ನು ಖಂಡಿಸುತ್ತೇವೆ.

■ ಸಾಮ್ರಾಜ್ಯಶಾಹಿ ಪಡೆಗಳ ಆಜ್ಞೆ ಮೇರೆಗೆ ರಾಷ್ಟ್ರದ ಸಾರ್ವಭೌಮತ್ವವನ್ನು ದುರ್ಬಲಗೊಳಿಸುತ್ತಿರುವ ಪ್ರಭುತ್ವದ ಅಸಂವಿಧಾನಿಕ ದೋರಣೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ.

■ ಪ್ರಭುತ್ವ ಬಂಡವಾಳಶಾಹಿಗಳ ಜೊತೆಶಾಮೀಲಾಗಿ ದಲಿತರು, ಆದಿವಾಸಿಗಳು, ರೈತರು, ಮತ್ತು ರೈತ ಕಾರ್ಮಿಕರ ವಿರುದ್ಧ ನಡೆಸುತ್ತಿರುವ ವ್ಯಾಪಕ ಹಿಂಸಾಚಾರವು ಕಾರ್ಮಿಕರ ಹಕ್ಕು, ಭೂ ಒಡೆತನ ಹಕ್ಕು ಅಷ್ಟು ಮಾತ್ರವಲ್ಲದೆ ಬದುಕಿನ ಸಾಮಾಜಿಕ ಹಕ್ಕು, ಆರ್ಥಿಕ ಹಕ್ಕು ಮತ್ತು ಜೀವಿಸುವ ಹಕ್ಕುಗಳನ್ನೇ ನಿರಾಕರಿಸುತ್ತಿರುವ ಮತ್ತು ಬದುಕನ್ನು ಬುಡಮೇಲು ಮಾಡುತ್ತಿರುವ ಸರಕಾರದ ಕ್ರಮಗಳನ್ನು ತೀವ್ರವಾಗಿ ಖಂಡಿಸುತ್ತೇವೆ.

■ ಡಾ. ಬಾಬಾಸಾಹೇಬ್ ಅಂಬೇಡ್ಕರ್ ರವರ ಸಂವಿಧಾನಬದ್ಧ ಪ್ರಜಾಪ್ರಭುತ್ವದ ಮೂಲಕ ಬ್ರಾತೃತ್ವ, ಸಮಾನತೆ ಮತ್ತು ಸಾಮಾಜಿಕ ನ್ಯಾಯಯುತ ಜೀವನದ ಕನಸುಗಳನ್ನು ಕಟ್ಟಿಕೊಡುವ ಆಶಯಗಳ ವಿರುದ್ಧ ಪ್ರಭುತ್ವ ನಡೆಸುತ್ತಿರುವ ಕಾರ್ಯಾಚರಣೆಯನ್ನು ನಾವು ಖಂಡಿಸುತ್ತೇವೆ.

■ ದೇಶದ ಸಮಗ್ರತೆ ಮತ್ತು ಒಕ್ಕೂಟ ವ್ಯವಸ್ಥೆ ಮತ್ತು ಸಂವಿಧಾನ ನೀಡಿರುವ ರಾಜ್ಯಗಳ ಸ್ವಾಯತ್ತತೆ ಮೇಲೆ ವ್ಯವಸ್ಥಿತವಾಗಿ ಆಕ್ರಮಣಕಾರಿ ದಾಳಿ ನಡೆಸುತ್ತಿರುವ ಸರಕಾರದ ಕ್ರಮವನ್ನುನಾವು ಖಂಡತುಂಡವಾಗಿ ಖಂಡಿಸುತ್ತೇವೆ.

■ ನಾಗರಿಕರು ತಮ್ಮ ಪ್ರಜಾಪ್ರಭುತ್ವ ಹಕ್ಕುಗಳನ್ನು ಅನುಸರಿಸುವ ಮತ್ತು ಆಚರಣೆಗೆ ತರುವ ಬದಲಾಗಿ ಪ್ರಭುತ್ವ ಅವುಗಳನ್ನು ಉದ್ದೇಶಪೂರ್ವಕವಾಗಿ ಕಸಿದುಕೊಳ್ಳುವ ನಿಟ್ಟಿನಲ್ಲಿಪ್ರಜಾಪ್ರಭುತ್ವದ ಹಕ್ಕುಗಳ ಅನುಷ್ಠಾನದಲ್ಲಿ ನಿರ್ಲಕ್ಷ್ಯ ಮತ್ತು ಕಾಯ್ದೆ ಕಾನೂನುಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ. ಸಂವಿಧಾನ ಸೂಚಿತ ನಿಯಮ ಮತ್ತು ಪ್ರಕ್ರಿಯಗಳನ್ನು ಪಾಲಿಸದ ಸರಕಾರದ ಇಂಥಾ ಕ್ರಮಗಳನ್ನು ನಾವು ಖಂಡಿಸುತ್ತೇವೆ.

■ ಎಲ್ಲಾ ನಾಗರಿಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ಆರ್ಥಿಕ, ರಾಜಕೀಯ ಮತ್ತು ಮಾನವ ಹಕ್ಕುಗಳನ್ನು ರಕ್ಷಿಸಲು ಮತ್ತು ಜಾತಿ, ಪುರುಷಪ್ರಧಾನತೆಯ ನಾಶ, ಕೋಮುಸೌಹಾರ್ಧತೆ ಖಾತ್ರಿಪಡಿಸಿಕೊಳ್ಳುವ ಮತ್ತು ಜಾತಿವಾದ ಮತ್ತು ಕೋಮುವಾದವನ್ನು ನಡೆಸುತ್ತಿರುವ ಎಲ್ಲಾ ಶಕ್ತಿಗಳ ವಿರುದ್ಧ ಹೋರಾಡಲು ಎಲ್ಲಾ ಸಾಮೂಹಿಕ ಹೋರಾಟ ನಡೆಸುತ್ತೇವೆಂದು ಘೋಷಿಸುತ್ತೇವೆ.

■ ಸಂವಿಧಾನದಲ್ಲಿ ಅಭಿವ್ಯಕ್ತಿ ಕಂಡುಕೊಳ್ಳುವ ಡಾ. ಅಂಬೇಡ್ಕರ್ ರವರ ಕ್ಲಾಸಿಕ್ ಸ್ಟೇಟ್ ಮತ್ತು ಅಲ್ಪಸಂಖ್ಯಾತರ ಕನಸನ್ನು ನನಸಾಗಿಸಲು ಬದ್ಧರಾಗುವ ಶಪಥ ಮಾಡುತ್ತೇವೆ.

■ ಭಾರತದ ಸಂವಿಧಾನ ಮತ್ತು ಅದರ ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ, ಪ್ರಜಾಪ್ರಭುತ್ವ, ಗಣರಾಜ್ಯ ಸಮಾನತೆ ಸ್ವಾತಂತ್ರ್ಯ, ಭ್ರಾತೃತ್ವವನ್ನು ರೂಪಿಸಲು ಶ್ರಮಿಸುವುದು.

■ ಭಿನ್ನಾಭಿಪ್ರಯವನ್ನು ಅಪರಾಧಿಕರಿಸಲು, ಟೀಕಿಸುವ ವ್ಯಕ್ತಿಗಳನ್ನು ಭಯೋತ್ಪಾದಕರು ಎಂದು ಬಂಧಿಸುವ ಹೆಚ್ಚಿನ ಅಧಿಕಾರವನ್ನು ನೀಡುತ್ತಿರುವ ಅಸಂವಿಧಾನಿಕ ಮತ್ತು ಕಾನೂನು ಬಾಹಿರ ಕಪ್ಪುಕಾಯ್ದೆಗಳಾದ ಯುಎಪಿಎ ಮುಂತಾದ ಕಾಯ್ದೆಗಳನ್ನು ರದ್ದುಗೊಳಿಸುವಂತೆ ಸಾರ್ವಜನಿಕ ಅಭಿಪ್ರಾಯ ಮೂಡಿಸುತ್ತೇವೆ.

■ ರಾಷ್ಟ್ರೀಯ ಹಿತಾಸಕ್ತಿ ಹೆಸರಿನಲ್ಲಿ ಭಿನ್ನಾಭಿಪ್ರಾಯದ ಧ್ವನಿಯನ್ನು ಬೆದರಿಸುವ, ಗುರಿಮಾಡುವ ಮತ್ತು ಕಿರುಕುಳ ನೀಡುವ ಸಾಧನಗಳಾಗಿ ಬಳಸಲಾದ ರಾಷ್ಟ್ರೀಯ ತನಿಖಾ ಸಂಸ್ಥೆ ಕಾಯ್ದೆ ಮತ್ತು ಸಾರ್ವಜನಿಕ ಸುರಕ್ಷತಾ ಕಾಯ್ದೆಯ ಕಠಿಣ ಮತ್ತು ಅಸಂವಿಧಾನಿಕವಾಗಿ ಬಂಧಿಸುವ ಕಾನೂನುಗಳನ್ನು ರದ್ದುಗೊಳಿಸುವವರೆಗೆ ನಿರಂತರವಾಗಿ ಪ್ರತಿಭಟಿಸುತ್ತೇವೆ.

■ ಭೀಮಾ ಕೊರೆಗಾಂವ್ ಪ್ರಕರಣದಲ್ಲಿ ಮೇಲ್ಕಂಡ ಕರಾಳ ಕಾಯ್ದೆ ಅಡಿ ಸುಳ್ಳು ಮೊಖದ್ದಮೆ ದಾಖಲಿಸಿ ಬಂಧಿಸಿ ಜೈಲಿನಲ್ಲಿಟ್ಟಿರುವ ಎಲ್ಲಾ ಮಾನವ ಹಕ್ಕು ಹೋರಾಟಗಾರರನ್ನು ಕೂಡಲೇ ಬಿಡುಗಡೆ ಮಾಡಲು ಹಾಗು ದೇಶದೆಲ್ಲೆಡೆ ವಿವಿಧ ಸುಳ್ಳು ಪ್ರಕರಣಗಳಲ್ಲಿ ಬಂಧಿತರಾಗಿರುವ ಇತರ ರಾಜಕೀಯ ಮತ್ತು ಮಾವ ಹಕ್ಕುಗಳ ಪ್ರತಿಪಾದಕರನ್ನು ಕೂಡಲೇ ಬಿಡುಗಡೆ ಮಾಡುವಂತೆ ನಿರಂತರ ಹೋರಾಟ ನಡೆಸುತ್ತೇವೆ ಮತ್ತು ಅವರ ಮೇಲಿನ ಸುಳ್ಳುಕೇಸುಗಳನ್ನು ಹಿಂತೆಗೆದು ಕೊಳ್ಳುವಂತೆ ಆಗ್ರಹಿಸುವ ಪ್ರಯತ್ನ ಮುಂದುವರೆಸುತ್ತೇವೆ.

**ಬನ್ನಿ.. ಸಂವಿಧಾನವನ್ನೂ, ದೇಶವನ್ನೂ.. ನಮ್ಮನ್ನೂ ಉಳಿಸಿಕೊಳ್ಳೋಣ.**